† Sri H. N. NANJE GOWDA.—The question was whether the survey work has been completed; for which I have stated 'no'.

Sri C. R. MOHAMED SAIFUDDIN.—At what stage the survey work is ?

Sri H. N. NANJE GOWDA.—It is at different stages.

ಶ್ರೀ ಸಿ. ಆರ್. ಮಹಮದ್ ಸೈಫುದ್ದೀನ್.—ಈ ಯೋಜನೆಯ ಅಂದಾಜು ವೆಚ್ಚವೆಷ್ಟು ಎಂಬುದನ್ನು ನಿಗದಿ ಮಾಡರಾಗಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಮೊದಲನೇ ಚೆಂಟೇಟ್ಸ್ ಅಂದಾಜಿದ ಪ್ರಕಾರ ಅಲ್ಲಿ 36 ಟಿ. ಎಂ. ಸಿ. ಎಫ್ಟಿ ನೀರನ್ನು ತಡೆಯಬೇಕೆಂದು ಅಂದಾಜು ಮಾಡರಾಗಿತ್ತು. ಮತ್ತೆ ಆ ಅಂದಾಜನ್ನು ರಿವೈಜ್ ಮಾಡರಾಯಿತು. ಅಲ್ಲಿ 18 ಟಿ. ಎಂ. ಸಿ. ಎಫ್ಟಿ ನೀರನ್ನು ತಡೆಯಬೇಕೆಂದು ಅಂದಾಜು ಮಾಡರಾಯಿತು. ಮೊದಲನೇ ಅಂದಾಜಿದ ಪ್ರಕಾರ 56 ಕೋಟಿ 38 ಲಕ್ಷ ರೂಪಾಯಿ ಆಗಿತ್ತು. ಎರಡನೆಯ ಅಂದಾಜಿಗೆ 28 ಕೋಟಿ 66 ಲಕ್ಷ ರೂಪಾಯಿ ಅಂದಾಜಾಗಿತ್ತು.

ಶ್ರೀ ಪಾಟೀಲ್ ಪಾಪಯ್ಯ ನಾಯಕ್.—ಇದನ್ನು ಬೇಗ ಪೂರ್ಣಗೊಳಿಸಬೇಕೆಂಬ ಆಸೆ ಸರ್ಕಾರದವರಿಗೆ ಇದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ನಾವು ಇಲ್ಲಿ ಪದೇ ಪದೇ ಹೇಳುತ್ತಲೇ ಇದ್ದೇವೆ. ಈ ವಿಚಾರ ಟ್ರಿಬ್ಯುನರ್ ಮುಂದಿದೆ. ಅಲ್ಲಿ ತೀರ್ಮಾನವಾಗುವವರೆಗೆ ಇಲ್ಲಿ ಏನು ಮಾಡುವುದಕ್ಕೂ ಬರುವುದಿಲ್ಲ.

ಶ್ರೀ ಬಾಪೂಗೌಡ ರಾಯಪ್ಪ.—ಆ ಟ್ರಿಬ್ಯೂನರ್ ಡಿಸಿಷನ್ ಯಾವಾಗ ಮುಗಿಯಬಹುದು ?

ಶ್ರೀ ಎಚ್. ಎನ್. ನಂಜೇಗೌಡ.—ಈಗಾಗಲೆ ಎವಿಡೆನ್ಸ್ ಮುಗಿದಿದೆ. ಇನ್ನು ಇರತಕ್ಕದ್ದು ಅರ್ಗ್ಯುಮೆಂಟ್, ಅದು ಮುಗಿದ 4-5 ತಿಂಗಳಲ್ಲೇ ನಮಗೆ ವರದಿ ಬರಬಹುದು. ಅಂತೂ ಇನ್ನು 5-6 ತಿಂಗಳಲ್ಲಿ ಅದು ತೀರ್ಮಾನವಾಗಬಹುದೆಂದು ನನಗೆ ಅನಿಸುತ್ತಿದೆ.

ಶ್ರೀ ಸಿ. ಆರ್. ಮಹಮದ್ ಸೈಫುದ್ದೀನ್.—ಆ ಕಮಾಷನ್ನಿನವರ ವರದಿ ಫೇವರಬಲ್ಲಾಗಿ ಬಂದರೆ ಈ ಪ್ರಾಜೆಕ್ಟ್‌ನ್ನು ಕೂಡಲೆ ಕೈಗೊಳ್ಳುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ನಮ್ಮ ಅಭಿಪ್ರಾಯದ ಪ್ರಕಾರ ನಮಗೆ ದೊರೆಯುತಕ್ಕ ನೀರೆಲ್ಲಾ ದೊರತರೆ ನಾವು ಅಲ್ಲಿ ಮೊದಲನ ಅಂದಾಜು ಪ್ರಕಾರ 36 ಟಿ. ಎಂ. ಸಿ. ಎಫ್ಟಿ ಗೆ ಪ್ರಾಜೆಕ್ಟನ್ನು ಕಟ್ಟುತ್ತೇವೆ.

Upper Bhadra Project and Hebbe Anecut

302. Sri M. MALLAPPA (Birur).—

Will the Minister of State for Major Irrigation be pleased to state :—

(a) the number of Schemes proposed to be taken up in Chikmagalur District for providing irrigation facilities to develop agriculture ;

(b) the stage at which the proposed Upper Bhadra Project and Hebbe Anicut is pending for execution ;

(c) the number of acres of land that will be irrigated from Upper Bhadra Project and Habbe Anicut respectively ;

† Astericks indicates that the remarks or speeches have not been revised by the member concerned.

(*d*) whether Government intends to provide irrigation facilities for Kadur Taluk from Habbe Anicut and Upper Bhadra Projects ?

Sri H. N. NANJE GOWDA (Minister of State for Major Irrigation).–

(*a*) Three Schemes.

(i) Upper Bhadra Project.

(ii) Hebbe Anicut.

(iii) Honnammanahalla project.

(*b*) Under investigation.

(*c*) Does not arise in view of reply to (*b*) above.

(*d*) Will be considered after investigation.

ಶ್ರೀ ಎಂ. ಮಲ್ಲಪ್ಪ.—ಈ ಯೋಜನೆಯನ್ನು ಯಾವಾಗ ಮುಗಿಸುತ್ತಾರೆ ?

† ಶ್ರೀ ಎಚ್. ಎನ್. ನಂಜೇಗೌಡ.—ಮೊದಲು ನಾನಾಗಲೇ ಹೇಳಿದಂತೆ 36 ಟಿ.ಎಂ.ಸಿ.ಎಫ್ಟಿಗೆ ಅಂದಾಜು ಮಾಡಲಾಗಿತ್ತು. ಆಗ ಇದಕ್ಕೆ ತುಂಗಾದಿಂದ ನೀರನ್ನು ಡೈವರ್ಟ್ ಮಾಡತಕ್ಕ ಅಗತ್ಯ ಇತ್ತು. ಆಗ ಇದು ಫೀಜಿಬಲ್ ಆಗುವುದಿಲ್ಲ, ಖರ್ಚು ಜಾಸ್ತಿ ಬರುತ್ತದೆಂಬ ಅಭಿಪ್ರಾಯ ಬಂದ ನಂತರ ಇದನ್ನು 16 ಟಿ.ಎಂ.ಸಿ. ಎಫ್ಟಿಗೆ ಪರಿವರ್ತನೆ ಮಾಡಬೇಕಾಯಿತು. ಈ ಕಾರಣದಿಂದ ಸ್ವಲ್ಪ ನಿಧಾನವಾಗಿದೆ.

ಶ್ರೀ ಎಂ. ಮಲ್ಲಪ್ಪ.—ಇದಕ್ಕೆ ವರಾಹ ನದಿ ನೀರನ್ನು ಡೈವರ್ಟ್ ಮಾಡತಕ್ಕ ಯೋಜನೆ ಇದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ನೋಟೀಸ್.

ಶ್ರೀ ಕಾಗೋಡು ತಿಮ್ಮಪ್ಪ.—ಹಾಲಿ ಇರತಕ್ಕ ಭದ್ರಾ ಮೇಲ್ದಂಡೆ ಯೋಜನೆಯ ಕೆಳಗಿರತಕ್ಕ ಅಚ್ಚುಕಟ್ಟಿಗೆಲ್ಲಾ ನೀರು ಇದೆಯೆಂಬುದನ್ನು ನಿರ್ಧಾರ ಮಾಡಿದ ನಂತರ ಈ ಕೆಳದಂಡೆ ಯೋಜನೆ ಉದ್ಭವಿಸುತ್ತದೆಯಲ್ಲವೇ ?

ಶ್ರೀ ಎಚ್. ಎನ್. ನಂಜೇಗೌಡ.—ನೋಟೀಸ್.

ಶ್ರೀ ಜಿ. ಪುಟ್ಟಸ್ವಾಮಿ.—ಹೊನ್ನಮ್ಮನಹಳ್ಳಿ ಪ್ರಾಜೆಕ್ಟ್ ಯಾವ ಹಂತದಲ್ಲಿದೆ ?

ಶ್ರೀ ಎಚ್. ಎನ್. ನಂಜೇಗೌಡ.—ಚಿಕ್ಕಮಗಳೂರು ಜಿಲ್ಲೆಗೆ ಅಯ್ಯನಕೆರೆ, ಮದಗದ ಕೆರೆಗೆ ಹೋಗತಕ್ಕ ನೀರನ್ನು ತಿರುಗಿಸತಕ್ಕ ವಿಚಾರ ಪರಿಶೀಲನೆಯಲ್ಲಿದೆ. ಅದು ಮುಗಿದ ನಂತರ ಇದರ ವಿಚಾರ ಗೊತ್ತಾಗುತ್ತದೆ. ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಪ್ಪ.—ಭದ್ರಾ ನಾಲೆಯ ನೀರನ್ನು ಕಡೂರಿನವರಿಗೆ ಕೊಡಬಾರದೆಂದು ಅದನ್ನು ಬೇರೆ ಕಡೆಗೆ ಡೈವರ್ಟ್ ಮಾಡಿದ್ದಾರಲ್ಲವೇ ? ಅಲ್ಲ ಇದರಿಂದ ನಮಾರು 96 ಸಾವಿರ ಎಕರೆಗೆ ನೀರು ಬರುತ್ತಿದ್ದುದು ನಿಂತು ಅಲ್ಲಯ ಜನರಿಗೆ ತೊಂದರೆಯಾಗಿಲ್ಲವೇ ?

ಶ್ರೀ ಎಚ್. ಎನ್. ನಂಜೇಗೌಡ.—ಅವರಿಗೆ ಇವರಿಗೆ ಕೊಡಬಾರದೆಂಬ ಪ್ರಶ್ನೆ ಇಲ್ಲ. ಅಲ್ಲಿ ಮುಖ್ಯವಾಗಿ ಕಾಂಟೂರ್ ಲೆವೆಲ್ ಪರ್ಮಿಟ್ ಮಾಡಬೇಕು. ಕಡಿಮೆ ಖರ್ಚಿನಲ್ಲಿ ಕೆಲಸಗಳಾಗಬೇಕು ಅಷ್ಟೇ ಮುಖ್ಯವಾದದ್ದು. ಆ ಅನುಕೂಲಗಳಿದ್ದರೆ ಸರ್ಕಾರದವರು ಅದನ್ನು ಪರಿಶೀಲಿಸುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಕಾಂಗ್ರೆಸ್ 'ಆರ್' ಸರ್ಕಾರ ಆಡಳಿತಕ್ಕೆ ಬಂದ ಎತ್ತಬೇಕು ಅಂದರೆ ಅತ್ತ ತಿರುಗುತ್ತದೆ ಅಲ್ಲವೇ !

ಶ್ರೀ ಎಚ್. ಎನ್. ನಂಜೇಗೌಡ.—ಹಿಂದೆ ಇದ್ದ ಸರ್ಕಾರದ ಕಾಲದಲ್ಲಿ ಹಾಗೆ ಆಗಿರಬಹುದು. ಈಗ ಹಾಗೆ ತಿರುಗುವುದಕ್ಕೆ ಸಾಧ್ಯವಿಲ್ಲ.